## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ (7ನೇ ನ್ಯಾಯಾಲಯ) ಮಂಗಳೂರು

## ಸಿ.ಸಿ. ನಂ. 995/2022

ದಿನಾಂಕ ಃ05.02.2025

| | | |
|---|---|---|
| ಹೆಸರು | ಃನಿತಿನ್ | ಸಿಡಬ್ಲ್ಯೂ - 3 |
| ತಂದೆ ಹೆಸರು | ಃನೇಕೋಜಿರಾವ್ | ಪಿ ಡಬ್ಲ್ಯೂ-3 |
| ವಯಸ್ಸು | ಃ 37 ವರ್ಷ | |
| ಉದ್ಯೋಗ | ಃ ಆಟೋ ಚಾಲಕ | |
| ವಾಸಸ್ಥಳ | ಃಅತ್ತಾವರ | ಪ್ರಮಾಣ ವಚನ ಬೋಧಿಸಲಾಯಿತು. |

### ಮುಖ್ಯ ವಿಚಾರಣೆ ಃ ಮಾನ್ಯ ಎ.ಪಿ.ಪಿ. ರವರಿಂದಃ

ಚಾಸಾ 1 ಮತ್ತು 2 ರವರ ಪರಿಚಯ ಇರುವುದಿಲ್ಲ. ಮೃತ ಕೆ ಎನ್ ರಮೇ ಶ್ ಅವರ ಪರಿಚಯ ಇರುವುದಿಲ್ಲ. ಆರೋಪಿಯ ಪರಿಚಯ ನನಗೆ ಇರುವುದಿಲ್ಲ. ಆರೋಪಿಯನ್ನು ನಾನು ನೋಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಅಪಘಾತ ಹೇಗೆ , ಎಲ್ಲಿ ಹಾಗೂ ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಪೊಲೀಸರಿಗೆ ನಾನು ಹೇಳಿಕೆ ಮತ್ತು ಮರುಹೇಳಿಕೆಯನ್ನು ನೀಡಿರುವುದಿಲ್ಲ.

ಸಾಕ್ಷಿಯು ಈಗಾಗಲೇ ಗುರುತಿಸಲಾದ ನಿಪಿ-1 ಮತ್ತು ನಿಪಿ-2 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಗಳನ್ನು ನಿಪಿ- 1(ಬಿ) ಮತ್ತು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಿಗೆ ನಾನು ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ಸದರಿ ದಾಖಲೆಗಳಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿಯು ಈಗಾಗಲೇ ಗುರುತಿಸಲಾದ ನಿಪಿ-3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ- 3(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿಯು ಕಡತವನ್ನು ಅಪಘಾತ ಪಡಿಸಿದ ಸ್ಥಳದ ಹಾಗೂ ವಾಹನದ ಪೋಟೋಗಳನ್ನು ನೋಡಿ ಗುರುತಿಸಿರುವುದಿಲ್ಲ. ನಿಪಿ- 4 ಪೋಟೋವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋವನ್ನು ಪಡೀಲ್ ನಲ್ಲಿ ಪೋಲಿಸರು ತೆಗೆದಿರುತ್ತಾರೆ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಪ್ರತಿಕೂಲ

ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ**

ದಿಃ 07.05.2022 ರಂದು ಬಾಡಿಗೆಗೆ ನಾನು ಅತ್ತಾವರದಿಂದ ಮರೋಳಿಗೆ ನನ್ನ ಆಟೋದಲ್ಲಿ ಬಂದು ಪ್ರಯಾಣಿಕರನ್ನು ಇಳಿಸಿ , ವಾಪಸ್ಸು ನಂತೂರು ಕಡೆಯಿಂದ ಪಡೀಲ್ ಜಂಕ್ಷನ್ ಕಡೆಗೆ ಹೋಗುತ್ತಾ ರಾ.ಹೆ.73 ರಲ್ಲಿ ಪಡೀಲ್ ಜಂಕ್ಷನ್ ಗಿಂತ ಸ್ವಲ್ಪ ಹಿಂದೆ ಕೊನೆಯ ತಿರುವು ಇಳಿಜಾರು ಬಳಿ ಸಮಯ ಸುಮಾರು ಸಂಜೆ 07.30 ಗಂಟೆಗೆ ಮೃತ ಕೆ.ಎನ್ ರಮೇಶ್ ರವರನ್ನು ಸ್ಕೂಟರನ್ನು ಚಲಾಯಿಸಿಕೊಂಡು ಹೋಗುತ್ತಿದ್ದಾಗ ಎಡಗಡೆಯಿಂದ ಕಾರು ಸಂಃ ಕೆಎ-21-Z-0300 ರ ಆರೋಪಿಯು ಅತಿವೇಗ ಹಾಗೂ ಅಜಾಗರೂಕತೆಯಿಂದ ಒಮ್ಮೆಲೆ ಕಾರು ತಿರುಗಿಸಿದಾಗ ಕಾರಿನ ಬಲಭಾಗವು ಸ್ಕೂಟರಿನ ಎಡಭಾಗಕ್ಕೆ ಡಿಕ್ಕಿಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಇದರ ಪರಿಣಾಮ ಸ್ಕೂಟರ್ ಸವಾರ ಸ್ಕೂಟರ್ ಸಮೇತ ರಸ್ತೆಗೆ ಬಿದ್ದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆ ಕೂಡಲೇ ನನ್ನ ಆಟೋವನ್ನು ರಸ್ತೆಯ ಬದಿಗೆ ನಿಲ್ಲಿಸಿ , ಅಲ್ಲಿ ಸೇರಿದ ಜನರೊಂದಿಗೆ ಮತ್ತು ಅಪಘಾತಪಡಿಸಿದ ಕಾರು ಚಾಲಕನೊಂದಿಗೆ ಸೇರಿ ತಲೆಗೆ ಗಂಭೀರವಾಗಿ ಗಾಯಗೊಂಡ ಸ್ಕೂಟರ್ ಸವಾರರನ್ನು ಆಸ್ಪತ್ರೆಗೆ ದಾಖಲಿಸಿರುತ್ತೇವೆಂದರೆ ಸರಿಯಲ್ಲ. ಗಾಯಾಳುವಿನ ಮೊಬೈಲ್ ನಿಂದ ಅವರ ಮಗಳಿಗೆ ಕರೆ ಮಾಡಿ ನಿಮ್ಮ ತಂದೆಗೆ ಪಡೀಲ್ ನಲ್ಲಿ ಅಪಘಾತವಾಗಿರುವುದಾಗಿ ತಿಳಿಸಿರುತ್ತೆವೆಂದರೆ ಸರಿಯಲ್ಲ. ನಾನು ಅಪಘಾತ ಸ್ಥಳದಲ್ಲಿದ್ದ ವಿದ್ಯುತ್ ದೀಪದ ಸಹಾಯದಿಂದ ಅಪಘಾತ ಪಡಿಸಿದ ಕಾರು ಮತ್ತು ಅಪಘಾತಕ್ಕೆ ಒಳಪಟ್ಟ ಸ್ಕೂಟರ್ ನ್ನು ನೋಡಿರುತ್ತೇನೆಂದರೆ ಸರಿಯಲ್ಲ. ಅಪಘಾತ ಪಡಿಸಿದ ಕಾರು ಸಂಃ ಕೆಎ-21-Z-0300 ಮತ್ತು ಅಪಘಾತಕ್ಕೆ ಒಳಪಟ್ಟ ಸ್ಕೂಟರ್ ಸಂಃ ಕೆಎ-70-ಹೆಚ್ -1311 ಹಾಗೂ ಕಾರಿನ ಚಾಲಕ ಸಾಧಿಕ್ ಆಲಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತವು ಕಾರು ಚಾಲಕನ ದುಡುಕುತನ ಹಾಗೂ ನಿರ್ಲಕ್ಷ್ಯತನದಿಂದ ಆಗಿರುತ್ತದೆ ಎಂದರೆ ಸರಿಯಲ್ಲ .

ದಿಃ 08.05.2022 ರಂದು ಚಾಸಾ 2 ರವರು ತೋರಿಸಿದ ಸ್ಥಳದಲ್ಲಿ ಬೆ. 09.00 ರಿಂದ 10.00 ಗಂಟೆ ತನಕ ನನ್ನ ಮತ್ತು ಚಾಸಾ 4 ರವರ ಸಮಕ್ಷಮ ನಿಪಿ- 1 ರಂತೆ ಸ್ಥಳ ಮಹಜರ್ ಮತ್ತು ನಿಪಿ- 2 ರಂತೆ ನಕಾಶೆಯನ್ನು ತಯಾರಿಸಿ , ಸದರಿ ದಾಖಲೆಗಳಿಗೆ ನಿಪಿ-1(ಬಿ) ಮತ್ತು ನಿಪಿ-2(ಬಿ) ರಂತೆ ತನ್ನ ಸಹಿಗಳನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಿಪಿ- 4 ರಂತೆ ಪೋಟೋ ತೆಗೆರದಿರುತ್ತಾರೆಂದರೆ ಸರಿ .

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಯಾವುದಾದರೂ ದಾಖಲೆಗೆ ಸಹಿ ಮಾಡುವಾಗ ಸದರಿ ದಾಖಲೆಯನ್ನು ಓದಿ ತಿಳಿದುಕೊಂಡು ಸಹಿ ಹಾಕುತ್ತೇವೆಂದರೆ ಸರಿ.

ದಿಃ 08.05.2022 ರಂದು ಬೆ. 10.30 ರಿಂದ 11.30 ಗಂಟೆ ತನಕ ನನ್ನ, ಚಾಸಾ 2 ಮತ್ತು 4 ರವರ ಸಮಕ್ಷಮ ಅಪಘಾತ ಪಡಿಸಿದ ಕಾರು ಸಂಃ ಕೆಎ-21-Z-0300 ಮತ್ತು ಅಪಘಾತಕ್ಕೆ ಒಳಪಟ್ಟ ಸ್ಕೂಟರ್ ಸಂಃ ಕೆಎ-70-ಹೆಚ್ -1311 ಗಳನ್ನು ಮಂಗಳೂರು ಸಂಚಾರ ದಕ್ಷಿಣ ಪೊಲೀಸ್ ಠಾಣಾ ಆವರಣದಲ್ಲಿ ನಿಪಿ- 3 ರಂತೆ ಮಹಜರ್ ತಯಾರಿಸಿ

ಅಮಾನತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಸದರಿ ದಾಖಲೆಗೆ ನಿಪಿ-3(ಬಿ) ರಂತೆ ಸಹಿ ಹಾಕಿರುತ್ತೇನೆಂದರೆ ಸರಿಯಲ್ಲ.

ದಿಃ 08.05.2022 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ಅಲ್ಲಗಳೆದ ಕಾರಣ, ಸದರಿ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು. ದಿಃ 22.05.2022 ರಂದು ಗಾಯಾಳು ಕೆಎನ್ ರಮೇಶ್ ರವರು ಚಿಕಿತ್ಸೆ ಫಲಕಾರಿಯಾಗದೇ ಫಸ್ಟ್ ನ್ಯೂರೋ ಆಸ್ಪತ್ರೆಯಲ್ಲಿ ಮೃತಪಟ್ಟಿರುವ ಪೊಲೀಸರಿಗೆ ನಾನು ಮರುಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ನಿಪಿ-10 ಎಂದು ಗುರುತಿಸಲಾಯಿತು.

ಈ ಎಲ್ಲಾ ವಿಚಾರ ನನಗೆ ಗೊತ್ತಿದ್ದರು ಸಹ ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.**

**ಮರು ವಿಚಾರಣೆ** ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಜೆ.ಎಂ.ಎಫ್ .ಸಿ 7 ನೇ ನ್ಯಾಯಾಲಯ,

ಮಂಗಳೂರು